**ಸಭಾಧ್ಯಕ್ಷರ ಅನುಮತಿ ಪಡೆದು ಮಂಡಿಸಿದ ವಿಚಾರ**

**ಭಾರತೀಯ ಮೀನುಗಾರರನ್ನು ಕೊಂದ ಆಪಾದನೆ ಎದುರಿಸುತ್ತಿರುವ**

**ಇಬ್ಬರು ಸೈನಿಕರನ್ನು ಭಾರತಕ್ಕೆ ಹಿಂದಿರುಗಿಸಲು ಒಪ್ಪದ ಇಟಲಿ**

**ವಿರೋಧ ಪಕ್ಷದ ನಾಯಕ(ಶ್ರೀ ಅರುಣ್ ಜೇಟ್ಲಿ)**: ಶ್ರೀ ಉಪಾಧ್ಯಕ್ಷ ಮಹೋದಯರೆ, ನಮ್ಮ ರಾಷ್ಟ್ರವನ್ನು ವಂಚಿಸಿದ ಸಾರ್ವಜನಿಕ ಮಹತ್ವದ ವಿಚಾರವನ್ನು, ಅತೀವ ನೋವು ಮತ್ತು ಯಾತನೆಯೊಂದಿಗೆ ವ್ಯಕ್ತಪಡಿಸುತ್ತಿದ್ದೇನೆ. ಭಾರತೀಯ ಮೀನುಗಾರರನ್ನು ಕೊಂದ ಆಪಾದನೆಯ ವಿಚಾರಣೆಯನ್ನು ಕೇರಳ ನ್ಯಾಯಾಲಯದಲ್ಲಿ ಎದುರಿಸುತ್ತಿರುವ ಇಟಲಿಯ ಇಬ್ಬರು ಸೈನಿಕರು ಈಗ ಕಾಣೆಯಾಗಿದ್ದಾರೆ. ಹಾಗೂ, ಸಾರ್ವಭೌಮತೆಯಿರುವ ರಾಷ್ಟ್ರವೊಂದು, ಭಾರತ ಸರ್ಕಾರ ಮತ್ತು ಭಾರತೀಯ ಸರ್ವೋಚ್ಚ ನ್ಯಾಯಾಲಯವನ್ನು ವಂಚಿಸಿ, ಮೋಸದಿಂದ ಅವರನ್ನು ಕಣ್ಮರೆ ಮಾಡಿದೆ. ರಾಜಾಶ್ರಯದೊಂದಿಗೆ ಭಯೋತ್ಪಾದನೆಯನ್ನು ಪ್ರಚೋದಿಸುವುದನ್ನು ನಾವು ಕಂಡಿದ್ದೇವೆ. ಆದರೆ, ತನ್ನ ರಾಷ್ಟ್ರದ ದಂಡ ಸಂಹಿತೆಗೆ ಬದ್ಧತೆ ವ್ಯಕ್ತಪಡಿಸುವ, ಪ್ರಜಾಪ್ರಭುತ್ವದ ವ್ಯವಸ್ಥೆಯಿರುವ ರಾಷ್ಟ್ರವೊಂದು, ವಂಚನೆ ಹಾಗೂ ಅಪಹರಣಕ್ಕೆ ರಾಜಾಶ್ರಯ ನೀಡುವ ಪ್ರಕರಣ ಇದೇ ಮೊದಲ ಬಾರಿಗೆ ನೋಡುವ ದೌರ್ಭಾಗ್ಯ ನಮ್ಮದಾಗಿದೆ. ಕ್ರಿಸ್‌ಮಸ್ ಆಚರಿಸಬೇಕು ಎಂಬ ಕಾರಣ ನೀಡಿ, ಆರೋಪಿಗಳಿಗೆ ತವರು ರಾಷ್ಟ್ರಕ್ಕೆ ಹೋಗಲು ಅನುಮತಿ ಕೋರಲು ಭಾರತದ ಸವೋಚ್ಚ ನ್ಯಾಯಾಲಯದ ಕದ ತಟ್ಟಿದ ಕಾರಣ ಇದನ್ನು ರಾಜಾಶ್ರಯದ ಅಪಹರಣವೆಂದೇ ತಿಳಿಯಬೇಕಾಗುತ್ತದೆ. ಭಾರತವು ನಾಗರಿಕ ನ್ಯಾಯಾಂಗ ವ್ಯವಸ್ಥೆ ಹೊಂದಿದೆ, ನಮ್ಮ ನ್ಯಾಯಾಲಯಗಳು ಕೋರಿಕೆಯನ್ನು ಮನ್ನಿಸುತ್ತವೆ. ಮತ ಚಲಾಯಿಸಲು ತಮ್ಮ ದೇಶಕ್ಕೆ ಮರಳುವ ಅನುಮತಿ ಕೋರಿರುವ ಪ್ರಸಂಗ ಕೊಂಚ ಕುತುಹಲದಿಂದ ಕೂಡಿದೆ. ನನಗೆ ಗೊತ್ತಿರುವ ಅಲ್ಪಸ್ವಲ್ಪ ಕಾನೂನಿನ ಆಧಾರದ ಮೇಲೆ ನನಗೆ ಜ್ಞಾತವಾದ ವಿಚಾರವೆಂದರೆ, ಸೆರೆವಾಸ ಅನುಭವಿಸುತ್ತಿರುವ ವ್ಯಕ್ತಿಗೆ ಮತ ಚಲಾಯಿಸುವ ಹಕ್ಕಿಲ್ಲ. ಆದ್ದರಿಂದ, ಮತ ಚಲಾಯಿಸಲು ಅವಕಾಶ ಕಲ್ಪಿಸಲು ಕಾರಾಗೃಹದಿಂದ ಬಿಡುಗಡೆ ಮಾಡಿ ಎಂಬ ಅರ್ಜಿಯನ್ನು ಸೆರೆವಾಸದಲ್ಲಿರುವ ಭಾರತೀಯ ನಾಗರಿಕ ಭಾರತೀಯ ನ್ಯಾಯಾಲಯದಲ್ಲಿ ಸಲ್ಲಿಸಿದ್ದರೆ, ಅಂತಹ ಅರ್ಜಿಯನ್ನು ಯಾವುದೇ ಕಾರಣಕ್ಕೂ ಮಾನ್ಯ ಮಾಡಲಾಗುತ್ತಿರಲಿಲ್ಲ.

(Contd. by 1O – GSP)

GSP-SCH-12.05-1O

**ಶ್ರೀ ಜೇಟ್ಲಿ ತಮ್ಮ ವಾದ ಮುಂದುವರಿಸುತ್ತಾ**: ಇಟಲಿಯ ನಾಗರಿಕರು ವಿಶ್ವದ ವಿವಿದೆಡೆ ನೆಲೆಸಿದ್ದರೂ, ಅವರಿಗೆ ಒಂದು ಸೌಲಭ್ಯವಿದೆ– ಶರತ್ತೆಂದರೆ ಅವರು ಸೆರೆವಾಸ ಅನುಭವಿಸದೆ ಮುಕ್ತ ಜೀವನ ನಡೆಸಿರಬೇಕು–ಹಾಗೂ ನಾನು ಇಟಲಿಯ ಗೃಹ ಸಚಿವಾಲಯದ ಪ್ರಕಟಣೆಯನ್ನು ಓದ ಬಯಸುತ್ತೇನೆ, "ವಿದೇಶದಲ್ಲಿರುವ ಇಟಲಿಯ ನಾಗರಿಕರು ಅಭ್ಯರ್ಥಿಗಳಿಗೆ ಮತಹಾಕಲು ಅಂಚೆಯನ್ನು ಬಳಸಬಹುದಾಗಿದೆ." ಆದ್ದರಿಂದ ಅವರು ಸುಲಭವಾಗಿ ಅಂಚೆ ಮೂಲಕ ಮತ ಹಾಕಬಹುದಿತ್ತು. ಇದೊಂದು ಪೂರ್ವನಿಯೋಜಿತ ಕೃತ್ಯವಿರಬಹುದು.

ವಿದೇಶದಲ್ಲಿದ್ದರೂ, ಅಂಚೆ ಮೂಲಕ ಮತ ಚಲಾಯಿಸುವ ಅವಕಾಶವನ್ನು ಅಲ್ಲಿಯ ಕಾನೂನು ಒದಗಿಸಿದ್ದರೂ, ಸ್ವದೇಶಕ್ಕೆ ತೆರಳಿ ಮತ ಚಲಾಯಿಸುವ ಅರ್ಜಿಯನ್ನು ಭಾರತದ ಸರ್ವೋಚ್ಚ

ನ್ಯಾಯಾಲಯದಲ್ಲಿ ಮಂಡಿಸಲಾಯಿತು. ಅದೇ ರೀತಿ, ಆದೇಶ ನೀಡಲು ಬರದಿದ್ದರೂ, ಸ್ವತಂತ್ರ ರಾಷ್ಟ್ರದ ವಾಗ್ದಾನ ಆಧರಿಸಿ ವಿದೇಶಕ್ಕೆ ತೆರಳುವ ಆದೇಶವನ್ನು ನೀಡಲಾಯಿತು. ಇದನ್ನು ನೋಡಿದಾಗ, ಇದೊಂದು ಪೂರ್ವ ಯೋಜಿತ ಕೃತ್ಯವೆಂಬ ಸಂದೇಹ ಮೂಡುತ್ತದೆ. ಅತ್ಯಂತ ಜವಾಬ್ದಾರಿಯಿಂದ ನಾನು ಈ ವಿಚಾರ ಹೇಳುತ್ತಿದ್ದೇನೆ ಹಾಗೂ ಇದಕ್ಕೆ ಬಲವಾದ ಕಾರಣವಿದೆ, ಅದೇನೆಂದರೆ, ವಾಗ್ದಾನವನ್ನು ಇಟಲಿಯ ಭಾರತದ ರಾಯಭಾರಿ ನೀಡಿದ್ದರೂ, ಅದಕ್ಕೆ ಆ ದೇಶದ ಪ್ರಧಾನಿಯ ಅನುಮೋದನೆ ಇದ್ದೇ ಇರುತ್ತದೆ ಮತ್ತು ವಾಗ್ದಾನವನ್ನು ಅವರು ನೀಡಿರುವುದು ಭಾರತದ ಸರ್ವೋಚ್ಚ ನ್ಯಾಯಾಲಯಕ್ಕೆ. ಹಾಗೂ, ಸ್ವತಂತ್ರ ವಾಗ್ದಾನವನ್ನು ಭಾರತದ ಸರ್ವೋಚ್ಚ ನ್ಯಾಯಾಲಯಕ್ಕೆ ನೀಡಿದ ಬಳಿಕ, ಆರೋಪಿಗಳು ವಿದೇಶಕ್ಕೆ ತೆರಳಿದ ನಂತರ, ಇಟಲಿ ಸರ್ಕಾರ ಮಾತು ಬದಲಾಯಿಸುತ್ತಾ, 'ನ್ಯಾಯಾಂಗ ವ್ಯಾಪ್ತಿ ಕುರಿತು ಭಿನ್ನಾಭಿಪ್ರಾಯವಿರುವುದರಿಂದ, ಸೈನಿಕರು ಹಿಂತೆರಳುವ ಅಗತ್ಯವಿಲ್ಲ', ಎಂದಿದ್ದು, ಭಾರತೀಯ ಕಾನೂನಿನ ಅನುಸಾರ ಆರೋಪಿಗಳು ಕಣ್ಮರೆಯಾಗಿದ್ದಾರೆ.

ನಮ್ಮ ನಾಗರಿಕರ ವಿರುದ್ದ ಮೊಕದ್ದಮೆ ಹೂಡಿದಾಗ, ನ್ಯಾಯಾಂಗ ವ್ಯಾಪ್ತಿಯ ವಿವಾದವನ್ನು ಭಾರತೀಯ ಕಾನೂನಿನಲ್ಲೂ ಎತ್ತಬಹುದು. ಭಾರತದಲ್ಲಿ 1984ರಲ್ಲಿ ಘಟಿಸಿದ ಪ್ರಕರಣಕ್ಕೆ, ಅಮೇರಿಕದಲ್ಲಿ ಜನರು ಮೊಕದ್ದಮೆಗಳನ್ನು ಹೂಡಿದ್ದರು. ನಾವು ಹೋಗಿ, ನ್ಯಾಯಾಂಗ ವ್ಯಾಪ್ತಿಯಿಲ್ಲವೆಂದು ವಾದಿಸೋಣ. ಹಾಗೂ, ಮೂರನೆ ಬಾರಿ ಅದನ್ನೇ ಮಾಡಿದ ದೇಶ ಇಲ್ಲಿದೆ. 1980ರಲ್ಲಿ, ರಕ್ಷಣಾ ವಲಯದ ಒಂದು ವ್ಯವಹಾರದಲ್ಲಿ, ಯಾರೋ ಒಬ್ಬರು, ಭಾರತದಿಂದ ಮಲೇಶ್ಯಾ ಮತ್ತು ಅರ್ಜಂಟೀನಾಗೆ ತೆರಳಿ ಅಲ್ಲಿಯೇ ಆಶ್ರಯ ಪಡೆಯುತ್ತಾನೆ, ನಾವು ನಿಸ್ಸಹಾಯಕರಾಗುತ್ತೇವೆ. ಅತಿಗಣ್ಯರ ಹೆಲಿಕಾಪ್ಟರ್ ವ್ಯವಹಾರದಲ್ಲಿ, ನಮ್ಮ ಅಧಿಕಾರಿಗಳು ಅಲ್ಲಿಗೆ ಹೋಗುತ್ತಾರೆ ಹಾಗೂ ಬರಿಗೈಯಲ್ಲಿ ಹಿಂದಿರುಗುತ್ತಾರೆ. ಇದಕ್ಕೆ ಕಾರಣವೆಂದರೆ, ಲಂಚ ಹಸ್ತಾಂತರಿಸುವಲ್ಲಿ ಇಟಲಿ ನಾಗರಿಕರೊಂದಿಗೆ ಭಾರತೀಯರು ಶಾಮೀಲಾಗಿರುವ ಸಾಕ್ಷಾಧಾರಗಳು ಲಭ್ಯವಾಗುವ ಸಾಧ್ಯತೆಯಿದೆ ಎಂದು ಹೇಳಲಾಗಿದ್ದು, ನಮ್ಮ ತನಿಖೆ ಮುಂದುವರಿಸುವುದು ಕಷ್ಟವಾಗಿದೆ. ರಾಜಾಶ್ರಯದ ವಂಚನೆ ಪ್ರಕರಣ ಇದಾಗಿದ್ದು, ಅಕ್ಷರಶಃ ಆರೋಪಿಗಳು ಭಾರತೀಯ ನ್ಯಾಯಾಲಯದ ನ್ಯಾಯಾಂಗ ವ್ಯಾಪ್ತಿಯಿಂದ ತಪ್ಪಿಸಿಕೊಂಡು ಹೋಗುವ ಪ್ರಯತ್ನವಾಗಿದೆ. ಮಾನ್ಯರೆ, ಇಂತಹ ಸಂದರ್ಭದಲ್ಲಿ ನಾವು ಏನು ಮಾಡುವ ಸ್ಥಿತಿಯಲ್ಲಿದ್ದೇವೆ? ಈ ವಿಚಾರದಲ್ಲಿ ಏನೂ ಮಾಡದ ನಿಸ್ಸಹಾಯಕ ಸ್ಥಿತಿಯಲ್ಲಿ ನಮ್ಮ ದೇಶವಿದೆಯೇ?

ಮಾನ್ಯರೆ, ಈ ಮೂರು ಉದಾಹರಣೆಗಳ ನಂತರ, ನಾನು ಪ್ರಸ್ತಾಪಿಸಲು ಬಯಸುವ ಸಂಗತಿಯೆಂದರೆ, ರೋಮನ್ನರೊಂದಿಗೆ ವ್ಯವಹರಿಸುವಾಗ, ರೋಮನ್ನರ ವ್ಯವಹಾರ ಮಾರ್ಗವನ್ನೇ ಅನುಸರಿಸಬೇಕು, ಆದಕಾರಣ, ಅವರಿಂದ ರಾಜತಾಂತ್ರಿಕ ನಿಯಮ ಉಲ್ಲಂಘನೆಯಾದ ಕಾರಣ, ಭಾರತ ಸರ್ಕಾರ ಅವರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕೆ ಹೊರತು ರಾಜತಾಂತ್ರಿಕ ಶಿಷ್ಟಾಚಾರದ ಒಪ್ಪಂದಕ್ಕೆ ಕಟಿಬದ್ಧರಾಗಿದ್ದೇವೆ ಎಂದು ಹೇಳಿ ಸುಮ್ಮನಿರಬಾರದು.

ಮಾನ್ಯರೆ, ನನಗೆ ಒಂದು ಸಂದೇಹವಿದೆ– ಕಾನೂನು ಸಚಿವರು ಇಲ್ಲೇ ಇರುವುದರಿಂದ, ಅವರು ನನ್ನ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಬೇಕು– ಇಟಲಿ ಸರ್ಕಾರದ ಪರವಾಗಿ ವಾಗ್ದಾನ ನೀಡಿದ ರಾಯಭಾರಿ, ಈ ಪ್ರಕರಣದಲ್ಲಿ ರಾಜತಾಂತ್ರಿಕ ರಕ್ಷಣೆಯನ್ನು ಹೊಂದಿದ್ದಾರೆ. ಭಾರತೀಯ ಸರ್ವೋಚ್ಚ ನ್ಯಾಯಾಲಯದ ನ್ಯಾಯಿಕ ಪರಿಧಿಯನ್ನು ಅವರು ಒಪ್ಪಿದಂತಾಯಿತು. ಒಮ್ಮೆ ನ್ಯಾಯಿಕ ವ್ಯಾಪ್ತಿಗೆ ಬಂದ ನಂತರ, ರಾಜತಾಂತ್ರಿಕ ರಕ್ಷಣೆಗಳ ಹಿಂದೆ ಅಡಗುವಂತಿಲ್ಲ.

ಎರಡನೆಯದಾಗಿ, ಮಾನ್ಯರೆ, ವಿಯೆನ್ನಾ ಒಪ್ಪಂದವು 1961ರ ಸಂವಿಧಾನ ಅಸ್ತಿತ್ವಕ್ಕೆ ಬಂದ ನಂತರದ ಒಪ್ಪಂದವಾಗಿದೆ. ಅದಕ್ಕೆ ದೇಶೀಯ ಕಾನೂನಿನ ರೂಪ ನೀಡುವ ಶಾಸನವನ್ನು ಜಾರಿಗೆ ತಂದಿದ್ದೇವೆ. ಭಾರತದ ಸಂವಿಧಾನವನ್ನು ಸಾಮಾನ್ಯ ದೇಶೀಯ ಒಪ್ಪಂದವು ಉಲ್ಲಂಘಿಸಲು ಬರುವುದಿಲ್ಲ ಹಾಗೂ ಕಲಂ 129ರ ಅಡಿ ನ್ಯಾಯಾಂಗ ನಿಂದನೆಗಾಗಿ ಸೂಕ್ತ ಶಿಕ್ಷೆ ವಿಧಿಸುವ ಅವರಕಾಶವಿದೆ. ವಿಯೆನ್ನಾ ಒಪ್ಪಂದವು ಭಾರತೀಯ ಸಂವಿಧಾನವನ್ನು ಉಲ್ಲಂಘಿಸಲು ಸಾಧ್ಯವಿಲ್ಲ, ಆದರೂ, ವಿಯೆನ್ನಾ ಒಪ್ಪಂದದಂತಹ ಸಂವಿಧಾನ ನಂತರದ ಒಪ್ಪಂದಗಳು ಭಾರತೀಯ ಸಂವಿಧಾನವನ್ನು ಉಲ್ಲಂಘಿಸಬಹುದೇ ಎಂದು ಕಾನೂನು ಸಚಿವರು ಪರಿಶೀಲಿಸಬೇಕು. ಇಟಲಿ ಸರ್ಕಾರ ಹಾಗೂ ಅದರ ರಾಯಭಾರಿ, ಭಾರತದ ಸರ್ವೋಚ್ಚ ನ್ಯಾಯಾಲಯದ ಪರಧಿಯನ್ನು ಒಪ್ಪಿರುವಾಗ, ನಮ್ಮ ಸಂವಿಧಾನವನ್ನು ಉಲ್ಲಂಘಿಸಬಹುದು ಎಂಬ ವಾದದ ಕುರಿತು ಗಂಭೀರ ಸಂದೇಹವಿದೆ.

(Contd. by SK-1p)

SK/1P/12.10

**ಶ್ರೀ ಅರುಣ್ ಜೇಟ್ಲೆ (ಮಾತು ಮುಂದುವರಿಸುತ್ತಾ)**: ಆದ್ದರಿಂದ, ಮಾನ್ಯರೆ, ಇದು ಮೂರನೆ ಬಾರಿ ನಮ್ಮ ದೇಶದೊಂದಿಗೆ ಈ ರೀತಿ ವರ್ತಿಸಿರುವುದರಿಂದ, ನನಗೆ ಅನಿಸುವ ಅಂಶವೆಂದರೆ, ರಾಜತಾಂತ್ರಿಕ ಶಿಷ್ಟಾಚಾರವನ್ನು ಮರೆಯುವ ಸಮಯ ಈಗ ಪಕ್ವವಾಗಿದೆ. ಮಾನ್ಯರೆ, ಗಂಭೀರವಲ್ಲದ ಒಂದು ವಿಷಯದಲ್ಲಿ ರೋಚಕ ಹೇಳಿಕೆಯೊಂದನ್ನು ಕೇಳಿದ್ದೇವೆ. ಅದೊಂದು ಪ್ರಚಲಿತ ಪಾತ್ರವಾಗಿದ್ದು, ನಮ್ಮಲ್ಲಿ ಕೆಲವರು ಅದನ್ನು ಸ್ಮರಿಸಬಹುದು. ಆ ಪಾತ್ರಧಾರಿಯ ವಾಡಿಕೆಯ ಹೇಳಿಕೆ ಹೀಗಿದೆ, "ಒಮ್ಮೆ ಆಗುವುದು ಸ್ವಾಭಾವಿಕ, ಎರಡನೆಯ ಬಾರಿ ಘಟಿಸುವುದು ಕಾಕತಾಳಿಯ, ಆದರೆ, ಮೂರನೆ ಬಾರಿ ಸಂಭವಿಸಿದರೆ ಅದು ಶತ್ರು ಕಾರ್ಯಾಚರಣೆ". ಇದು ಜೇಮ್ಸ ಬಾಂಡ್, ಇಯಾನ್ ಫ್ಲೇಮಿಂಗ್ ಆಡುವ ಪ್ರಚಲಿತ ವಾಡಿಕೆಯ ಹೇಳಿಕೆ. ಒಬ್ಬ ವ್ಯಕ್ತಿಯನ್ನು ಅಪಹರಿಸಿ, ಭಾರತದ ನ್ಯಾಯಾಂಗ ವ್ಯಾಪ್ತಿಯಿಂದ ದೂರಕ್ಕೆ ರವಾನಿಸಿ, ಭಾರತ ಹಾಳಾಗಲಿ ಎಂಬ ಧೋರಣೆಯೊಂದಿಗೆ ತಾತ್ಸಾರದ ಭಾವನೆ ಮೂಡುವ ಕಾರ್ಯದಲ್ಲಿ ತೊಡಗಿರುವುದು ಶತ್ರು ಕಾರ್ಯಾಚರಣೆ ಎಂದೇ ಪರಿಗಣಿಸಬೇಕಾಗುತ್ತದೆ. ಆದ್ದರಿಂದ, ಈ ಕಾರ್ಯಾಚರಣೆಗೆ ಭಾರತ ಸರ್ಕಾರ ಪ್ರತಿಕ್ರಯಿಸಿ ಅದರ ಗಾಂಭೀರ್ಯತೆಗೆ ಸರಿದೂಗುವ ನಿಲುವನ್ನು ತಾಳಬೇಕು.

(ಮುಕ್ತಾಯ)